

ಮೆಲ್ಲಗೆ ಇರುಳು ಕಳೆಯತೊಡಗಿತು. ಹೂವಿನ ಪರಿಮಳ ತೋಟದ ತುಂಬ ತುಂಬಿತ್ತು. ಗೋಡೆಯ ಪಕ್ಕದ ಮರಗಳ ರೆಂಬೆಯಿಂದ ಪಟಪಟ ಎಂದು ಗರಿಕೆದರಿ ಹಕ್ಕಿಗಳು ಹಾರಿದವು. ಪಾಳುಬಿದ್ದ ಗೋಡೆಯ ಪಕ್ಕದಲ್ಲಿದ್ದ ಬೇವಿನ ಮರದ ರೆಂಬೆಯಲ್ಲಿ ಕೋಗಿಲೆಯೊಂದು ಕೂಗಿತು. ಬೆಳಗಾಗುವುದರೊಳಗೆ ಹೃದಯದಲ್ಲಿ ಹುದುಗಿರುವ ಶೋಕವನ್ನೆಲ್ಲಾ ಸಂಗೀತವಾಗಿಸುವ ಆತಂಕ ಅದಕ್ಕೆ. ಮೊದಲು ಆ ದನಿ ಪೆರಿಯಾಳ್ವಾರ್ ಅವರ ಕಿಬ್ಬೊಟ್ಟೆಯನ್ನು ಕಲಕಿತು. ನಂತರ ಹೃದಯ ಮೃದುವಾಗಿ ನೀರಾಯಿತು. ಆ ಕೋಗಿಲೆ ಹಾಡುವುದು ತನ್ನ ಶೋಕವನ್ನೇ ಎಂದು ಭಾವಿಸಿದಾಗ ಮತ್ತೆ ಮನಸ್ಸು ಕರಗಿತು. ಪರವಶತೆಯಿಂದ ನಿತ್ರಾಣರಾಗಿ ಕೆಳಗೆ ಬಿದ್ದುಬಿಡುತ್ತೇನೇನೋ ಎಂದು ಅವರಿಗೆ ಅನಿಸಿತು.

ಸಂಕಟದಲ್ಲಿ ತತ್ತರಿಸಿದರು. ಹೂಗಳ ಮಧ್ಯೆ ಆಂಡಾಳಿನ ಕೆಂಪು ಮುಖ ನಗುವಂತೆ ಕಂಡಿತು. ಹೊಚ್ಚ ಹೊಸದಾಗಿ ನಾರಾಯಣನಿಗೆ ಕಟ್ಟಿದ ಮಾಲೆಯನ್ನು ಧರಿಸಿಕೊಂಡು ಕುಣಿದಾಡಿದ ದೃಶ್ಯ ನೆನಪಾಯಿತು. ನಿನ್ನೆ ಆ ಸ್ಥಿತಿಯಲ್ಲಿ ಆಂಡಾಳನ್ನು ನೋಡಿದಾಗ ಪೆರಿಯಾಳ್ವಾರ್ ನಂಬಲಾಗದೆ ಹೆಪ್ಪುಗಟ್ಟಿಹೋಗಿದ್ದರು. ಭೂಮಿ ಕಂಪಿಸುವಂತೆ ಅವರ ಎದೆ ಸಿಡಿಯಿತು. “ಆಂಡಾಳ್, ಎಂಥ ಕೆಲಸ ಮಾಡಿದೆ ಮಗಳೇ? ದೇವರಿಗೆ ಕಟ್ಟಿದ ಮಾಲೆಯನ್ನು ನೀನು ಮುಡಿಯಬಹುದೇ?” ಎಂದು ಗಾಬರಿಯಿಂದ ಕೇಳಿದರು.

“ಮುಡಿದು ನೋಡುವುದರಲ್ಲಿ ತಪ್ಪೇನಿದೆ ಅಪ್ಪ? ಚೆನ್ನಾಗಿದೆಯಲ್ಲವೇ?” ಮುದ್ದಾದ ದನಿಯಲ್ಲಿ ಮಗಳು ಕೇಳಿದಳು. ಮಗಳ ಇಂಪಾದ ದನಿಯೂ, ಮುಗ್ಧ ಮುಖವೂ ಅವರ ಕೋಪವನ್ನು ತಣಿಸಿತು. “ಆಂಡಾಳ್” ಎಂದು ಹೇಳುತ್ತಲೇ ಮುಂದಕ್ಕೆ